ಹೊತ್ತಿಗೆ ತುಂಬಾ ಹೋತ್ತೇ ಕಳೆದಿತ್ತು. ಬ್ಯಾಟರಿಯನ್ನು ಮತ್ತೆ ಎತ್ತಿಕೊಂಡು ನಡುಮನೆಯ ಗೋಡೆಗೆ ಬೆಳಕು ಬಿಟ್ಟ. ಅಲ್ಲಿದ್ದ ಎರಡು ದೊಡ್ಡ ಪಟಗಳಲ್ಲಿ ವಿನೋಬಾ ಬಾವೆಯ ಪಟವನ್ನು ಬಿಟ್ಟು ಗಾಂಧಿಯ ಪಟವನ್ನು ಯಾರೋ ಬಿಚ್ಚಿಕೊಂಡು ಹೋಗಿದ್ದರು. ಆ ಪಟದಡಿಗಿದ್ದ ಮರದ ರಿಪೀಸಿಗೆ ಗೆದ್ದಲಿಡಿದಿತ್ತು. ವಿನೋಬಾ ಭಾವೆಯ ಪಟದ ಚೌಕಟ್ಟಿಗೂ ಆ ಗೆದ್ದಲು ವ್ಯಾಪಿಸಿಕೊಂಡು ವಿನೋಬಾ ಭಾವೆಯವರ ಪಟದಲ್ಲಿ ಅವರ ಕಾಲುಗಳನ್ನು ಪೂರಾ ತಿಂದಾಕಿತ್ತು. ಜೊತೆಗೆ ದೂಳಿಗೆ ಕಪ್ಪಿಡಿದು ಹೋಗಿದ್ದ ಅದರ ತುಂಬಾ ಜೇಡ ಬಲೆಕಟ್ಟಿಕೊಂಡಿತ್ತು.

ಗದ್ದಿಗ್ಯಪ್ಪ ಗೋಡೆಯ ಹತ್ತಿರ ಹೋಗಿ ಅಲ್ಲಿ ಗುಡ್ಡಾಕಿಕೊಂಡಿದ್ದ ಮಣ್ಣಿಗುಡ್ಡೆಯ ಮೇಲತ್ತಿ ವಿನೋಬಾ ಭಾವೆಯ ಪಟವನ್ನು ಬಿಚ್ಚಿಕೊಂಡು ಕೆಳಕ್ಕಿಳಿದು ತೊಲೆಗಳತ್ತ ಕಣ್ಣಾಡಿಸಿದ. ಅವುಗಳೂ ಅಲ್ಲಲ್ಲಿ ಹುಳಾಡಿ ಮರದ ಪುಡಿ ಜಿನುಗಿದಂತೆ ಕೆಳಕ್ಕುದುರುತ್ತಿತ್ತು. ಹಂಗೆ ನೋಡುತಿದ್ದವನಿಗೆ ಅಂಥ ತೊಲೆಯೊಂದರಲ್ಲಿ ಅಡ್ಡಡ್ಡ ಹೊಡೆದಿದ್ದ ಮಳೆಗಳೆರಡರಲ್ಲೂ ನೇತಾಡುತ್ತಿದ್ದ ತಂಬೂರಿ ಕಾಣಿಸಿತು. ಗದ್ದಿಗ್ಯಪ್ಪನೊಳಗೆ ಎಂಥದೋ ಮಿಂಚಾಡಿದಂತಾಯ್ತು. ಆನಂದದ ಸೆಳೆಯೊಂದು ಅವನನ್ನು ಹಿಡಿದು ಒಮ್ಮೆಲೇ ಕುಕ್ಕಿದಂತಾಯ್ತು.



ತಂಬೂರಿಯನ್ನು ಕೆಳಕ್ಕಿಳಿಸಿಕೊಂಡು ಅದರ ತುಕ್ಕಿಡಿದಿದ್ದ ತಂತಿಗಳನ್ನು ಪುಟ್ಟದೊಂದು ಕಲ್ಲಿನಿಂದ ಉಜ್ಜಿ, ತಂತಿಯನ್ನು ಆತಿಡಿದಿದ್ದ ಗೂಟಗಳೆರಡನ್ನೂ ಜೋಪಾನದಿಂದ ಬಿಗಿಹಚ್ಚಿ, ಶೃತಿ ಹಿಡಿಯುತ್ತಾ ನಡುಮನೆಯಲ್ಲಿದ್ದ ಮಣ್ಣಿನ ಗುಡ್ಡೆಗೆ ಒರಗಿಕೊಂಡು, ತಾನು ಬಿಚ್ಚಿಕೊಂಡಿದ್ದ ಪಟದ ಧೂಳನ್ನೆಲ್ಲಾ ತನ್ನ ಜುಬ್ಬದ ಚುಂಗಿನಿಂದ ವರೆಸಿ, ನಂತರ ಅದನ್ನು ತೊಡೆಗಳ ಮೇಲಿಕ್ಕಿಕೊಂಡು ಚಣೊತ್ತು ಕೂತ. 'ಉತ್ತಿಲ್ಲ ಬಿತ್ತಿಲ್ಲ ನೆಲ ನಂದು ಅನ್ನೋಕೆ ನಾನ್ಯಾರು? ನಿರ್ಮೋಹಿಯಾಗದ ಹೊರತು ಹಂಗಿಲ್ಲದ ಬದುಕಿನ ದಾರಿ ಹಿಡಿಯಲಾದೀತೆ? ಉತ್ತು ಬಿತ್ತಿ ಬೆಳೆದವನಲ್ಲವೇ ಅದರ ಒಡೆಯ? ಯಾವುದೂ ಶಾಶ್ವತವಲ್ಲದ ಈ ಬದುಕಿನಲ್ಲಿ ಸಮಾಧಿಗಳ ಹಂಗೇಕೆ?' ಗದ್ದಿಗ್ಯಪ್ಪ ತನ್ನಷ್ಟಕ್ಕೇ ತಾನು ಮಾತಾಡಿಕೊಂಡು ಮಾಡಿನತ್ತ ಕಣ್ಣು ನೆಟ್ಟ. ಅಲ್ಲಿ ಕತ್ತಲೆಯನ್ನು ಬಿಟ್ಟುಮತ್ತೇನೂ ಕಾಣದ್ದರಿಂದ ತಂಬೂರಿಯ ತಂತಿಯನ್ನು ಮೀಟುತ್ತಾ, 'ತಮಂಧವಂಜುವುದು ಜ್ಯೋತಿಗಯ್ಯ' ವಚನವನ್ನು ತಿರು ತಿರುಗಿ ಹಾಡೇ ಹಾಡಿದ. ತನ್ನ ದನಿಯೊಳಗಿದ್ದ ದಣಿವು ಮಾಯವಾಗಿದ್ದ ಕಂಡು, 'ಎನ್ನ ಕಾಯದ ಕತ್ತಲೆಯ ಕಳೆಯಯ್ಯ' ಮತ್ತೊಂದು ವಚನದ ಹಾಡನ್ನೆತ್ತಿಕೊಂಡ.

ಆ ಅಪರ ಇರುಳಿನಲ್ಲಿ ಗದ್ದಿಗ್ಯಪ್ಪನ ಹಾಡು ಮನೆಯಿಂದಾಚೆಗೆ ಅಷ್ಟಾಗಿ ದಾಟಲಾಗದೆ ಆ ಇಡೀ ಮನೆಯ ತುಂಬಾ ಅನುರಣಿಸುತ್ತಿತ್ತು. ಆದರೂ ಇರುಳಿನಲ್ಲಿ ಒಂದು ಕೋಳಿ ನಿದ್ದೆಯನ್ನು ಬಿಟ್ಟರೆ ಸುತರಾಂ ನಿದ್ದೆ ಬಾರದೇ ಒದ್ದಾಡುತ್ತಿದ್ದ ಪಕ್ಕದ ಮನೆಯ ಜವರಜ್ಜನ ಕಿವಿಗಳಿಗೆ ಅದೇಗೋ ತಟಾಯ್ದುಬಿಡ್ತು. ಅದು ಅವನೊಳಗೆ ಇನ್ನಿಲ್ಲದ ಸೋಜಿಗವನ್ನು ಹುಟ್ಟಾಕಿತು. ಹಾಡು ಕೇಳುತ್ತಿರುವುದು ಹೌದೋ ಅಲ್ಲವೋ ಅಥವಾ ಅದು ತನ್ನ ಭ್ರಮೆಯೋ ಎಂಬುದನ್ನು ನಿಕ್ಕಿ ಮಾಡಿಕೊಳ್ಳಲು ಜವರಜ್ಜ ಮತ್ತತ್ತೆ ತನ್ನ ಅರೆ ಕಿವುಡು ಕಿವಿಗಳಿಂದ ಕೇಳಿಸಿಕೊಳ್ಳುತ್ತಾ ನಿಕ್ಕಿಮಾಡಿಕೊಂಡ.

ಅದು ನಿಜ ಅಂತ ತಿಳಿಯುತ್ತಲೇ, 'ಲೇ ಮಗಾ, ಗದ್ದಿಗ್ಯಪ್ಪ ಬಂದಿರಂಗಾದಾನೆ ನೋಡೋ. ಅವ್ನನ್ನ ಬಿಟ್ರೆ ಈ ಊರಲ್ಲಿ ಆ ಹಾಡುಗಳ್ನ ಯಾರೂ ಹಾಡ್ತ ಇರ್ಲಿಲ್ಲ' ಅಂತ ಮಗನನ್ನು ಜೋರಾಗಿ ಕೂಗಿ ಎಚ್ಚರಿಸಿದ. ಹೆಂಡತಿಯೊಂದಿಗೆ ಬೆಚ್ಚಗೆ ಮಲಗಿದ್ದ ಮಗ ರಾಮಲಿಂಗನಿಗೆ ವಯಸ್ಸಾದ ಅಪ್ಪನ ಕಿರಿಕಿರಿ ಅತೀ ಅನಿಸಿ, 'ಅಯ್ಯೋ ನಿಂದೊಳ್ಳೆ ಗೋಳಾಯ್ತು ಸುಮ್ಕೆ ಬಿದ್ಕಳಪ್ಪ' ಅಂದ. ಆದರಾ ಮಾತುಗಳು ಜವರಜ್ಜನ ಕಿವಿಗಳವರೆಗೂ ತಟಾಯಲೇ ಇಲ್ಲ. ಹಂಗಾಗಿ ಮತ್ತೆ ಗದ್ದಿಗ್ಯಪ್ಪನ ಕಿವಿಯಾನಿಸಿಕೊಂಡ. ಗದ್ದಿಗ್ಯಪ್ಪನ ಹಾಡು ಜವರಜ್ಜನೊಳಗೆ ಮತ್ತೂ ಸ್ಪಷ್ಟವಾಗತೊಡಗಿತು. 'ಲೋ ನಿನ್ನ ಕಿವಿ ಇಂಗಿ ವೋಗಿದಾವೇನೋ, ಹಂಗೇ ವಸಿ ಕೇಳುಸ್ಕಾ ನಾನು ಹೇಳ್ತಿರಾದು ದಿಟಾನಾ ಇಲ್ವಾ ಅಂತಾ' ಅಂತ ಮತ್ತೆ ಕರೆದ. 'ಹಂಗೇ ಬಡ್ಕಂಡು ಸಾಯಿ' ಅಂತ ಸಿಡಿಮಿಡಿಗೊಂಡ ರಾಮಲಿಂಗ ಹೆಂಡತಿಯನ್ನು ಮತ್ತಷ್ಟು ಬಿಗಿಯಾಗಿ ತಬ್ಬಿಕೊಂಡು ತಲೆ ತುಂಬಾ ಕಂಬಳಿಯನ್ನು ಎಳಕಂಡ. ●